ಅ) ಕೇಂದ್ರ ಸರ್ಕಾರವು ೧೯೫೬ನೇ ರಾಜ್ಯ ಪುನರ್ ವಿಂಗಡಣಾ ಕಾಯ್ದೆಗೆ ತಿದ್ದುಪಡಿ ತರಲು ರಾಜ್ಯ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಭಾರತ ಸರ್ಕಾರವು ಲೋಕಸಭೆಯಲ್ಲಿ ಸೂಕ್ತ ವಿಧೇಯಕವನ್ನು ಮಂಡಿಸುವುದರ ಮೂಲಕ ಮಹಾಜನ ಆಯೋಗದ ಶಿಫಾರಸ್ಸನ್ನು ಅನುಷ್ಠಾನಕ್ಕೆ ತರಲು ಕ್ರಮ ಕೈಗೊಳ್ಳಬೇಕಾಗಿದ್ದು ಈ ದಿಸೆಯಲ್ಲಿ ವಿಳಂಬವಾಗಿದೆ.

ಆ) ಕರ್ನಾಟಕ ಸರ್ಕಾರವು ಮಹಾಜನ ವರದಿಯನ್ನು ಅನುಷ್ಠಾನಕ್ಕೆ ತರಬೇಕೆಂದು ದೃಢವಾಗಿ ಭಾರತ ಸರ್ಕಾರವನ್ನು ಒತ್ತಾಯಿಸುತ್ತಿದೆ. ಈ ವಿಷಯದಲ್ಲಿ ದಿನಾಂಕ ೨೦-೮-೧೯೫೫, ೧೧-೯-೧೯೫೫ ಮತ್ತು ೯-೧೦-೧೯೫೫ ರಂದು ಮೂರು ಪತ್ರಗಳನ್ನು ಪ್ರಧಾನ ಮಂತ್ರಿಯವರಿಗೆ ಬರೆಯಲಾಗಿದ್ದು, ಮಹಾಜನ ವರದಿ ಅಂತಿಮವೆಂದು ಇದನ್ನು ಅನುಷ್ಠಾನಕ್ಕೆ ತರದಿದ್ದರೆ, ಕರ್ನಾಟಕಕ್ಕೆ ತೀವ್ರ ಅನ್ಯಾಯವಾಗುವುದೆಂದೂ ಮನವರಿಕೆ ಮಾಡಿಕೊಡ ಲಾಗಿದೆ.

ಮಹಾಜನ ವರದಿಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕೆಂದು ಭಾರತ ಸರ್ಕಾರವನ್ನು ಒತ್ತಾಯಿಸುವ ಒಮ್ಮತದ ನಿರ್ಣಯಗಳನ್ನು ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳು ಕ್ರಮವಾಗಿ ದಿನಾಂಕ ೨೨-೩-೧೯೫೬ ಹಾಗೂ ೨೬-೩-೧೯೫೬ ರಂದು ಅಂಗೀಕರಿಸಿವೆ. ಅಲ್ಲದೇ ಸರ್ವಪಕ್ಷೀಯ ಶಾಸಕರ ನಿಯೋಗವೊಂದನ್ನು ಪ್ರಧಾನ ಮಂತ್ರಿಗಳ ಬಳಿ ಆದಷ್ಟು ಜಾಗೃತೆ ಕೊಂಡೊಯ್ಯಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಪಿ. ಬಿ. ದೇಸಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಯವರೆವಿಗೂ ಪತ್ರಗಳನ್ನು ಬರೆದಿದ್ದಾರೆ. ಈ ಸದನದಲ್ಲಿ ರೆಜಲ್ಯೂಷನ್ಸ್ ಪಾಸ್ ಮಾಡಿದ್ದಾರೆ ಇಷ್ಟಾದರೂ ಪ್ರಭಾವವೇನೂ ಅವರ ಮೇಲೆ ಬೀರಲಿಲ್ಲ. ಮುಂದೆ ಯಾವ ವಿಚಾರವನ್ನು ತಾವಿಟ್ಟುಕೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ಈ ಮನೆಯಲ್ಲಿ ಒಂದು ಸಲ ಅಲ್ಲ, ಎರಡು ಸಲ ಅಲ್ಲ, ಮೂರು ಸಲ ತರಾವನ್ನು ಪಾಸ್ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಇದರ ಜೊತೆಗೆ ಈ ಹಿಂದೆ ಒಂದು ಸಲ ಅಲ್ಲ, ಎರಡು ಸಲ ಅಲ್ಲ, ಮೂರು ಸಲ ಶಾಸಕರ ನಿಯೋಗ ಕೇಂದ್ರಕ್ಕೆ ಹೋಗಿ ಅಂದಿನ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಇದನ್ನು ಮನವರಿಕೆ ಮಾಡಿಕೊಡಲಾಗಿದೆ. ಇದರ ಜೊತೆಗೆ ಕಾಲಕಾಲಕ್ಕೆ ಅವರಿಗೆ ಪತ್ರಗಳನ್ನು ಬರೆಯುತ್ತಿದ್ದೇವೆ. ಇದರ ಮೇಲೆ ಮತ್ತೆ ಏನು ಕ್ರಮ ಕೈಕೊಂಡಿದ್ದೀರಿ ಎಂದು ಕೇಳಿದರೆ ಅದಕ್ಕೆ ಏನು ಉತ್ತರ ಹೇಳುವುದು ? ಇಷ್ಟಾದ ಮೇಲೂ ಅವರ ಮೇಲೆ ಈ ಬಗ್ಗೆ ಪ್ರಭಾವ ಬೀರದಿದ್ದರೆ ಈ ಮನೆಯ ಒಮ್ಮತದ ತರಾವು ಸಹ ಅವರ ಮೇಲೆ ಪ್ರಭಾವ ಬೀರದಿದ್ದರೆ ಮತ್ತೆ, ಏನು ಮಾಡಬಹುದು ? ನಮ್ಮಲ್ಲಿ ಸೈನ್ಯ ಇಲ್ಲ, ಸೈನ್ಯ ಇದ್ದಿದ್ದರೆ ಅದನ್ನು ಕಳುಹಿಸಿಕೊಡಬಹುದು ಅಷ್ಟೆ.

ಕೊಣ್ಣೂರಿನಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವುದು

೧೫೭೦ ಶ್ರೀ ಎಂ ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಣ್ಣೂರಿಗೆ ಬಸ್ ನಿಲ್ದಾಣವು ಮಂಜೂರಾಗಿದ್ದು ಇನ್ನು ಕೆಲಸ ಪ್ರಾರಂಭ ಮಾಡದಿರಲು ಕಾರಣಗಳೇನು ?

ಆ) ಯಾವಾಗ ಅದನ್ನು ಪ್ರಾರಂಭ ಮಾಡಲಾಗುವುದು ?

ಶ್ರೀ ಪಿ ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಕ.ರಾ.ರ.ಸಾ. ಸಂಸ್ಥೆಯು ಕೊಣ್ಣೂರಿನಲ್ಲಿ ತಂಗು ದಾಣವನ್ನು ನಿರ್ಮಿಸಲು ಯೋಚಿಸಿದೆ.

ಆ) ಆರ್ಥಿಕ ಅನುಕೂಲತೆಗಳನ್ನು ಗಮನಿಸಿ ಸೂಕ್ತ ನಿವೇಶನವನ್ನು ಪಡೆದ ನಂತರ ತಂಗುದಾಣವನ್ನು ನಿರ್ಮಿಸಲಾಗುವುದು.

ಶ್ರೀ ಎಂ. ಎಲ್. ಮುತ್ತಣ್ಣಪರ್.—ಈ ಬಗ್ಗೆ ಈಗಾಗಲೇ ಕಾರ್ಯಕ್ರಮ ಕೈಕೊಂಡಿದ್ದರೂ ಹಳದ ಒಂದು ವರ್ಷದಿಂದ ಈ ಕೆಲಸ ಆಗಿಲ್ಲ. ಆದಷ್ಟು ಬೇಗ ಇದನ್ನು ಮಾಡಿಕೊಡಬೇಕೆಂದು ತ್ತಾಯ ಪಡಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಆಲ್ಲಿ ಜಾಗ ಸಿಕ್ಕಿದ ತಕ್ಷಣ ಇದನ್ನು ಮಾಡಿಸಿಕೊಡುತ್ತೇನೆ.

ವಿಚಾರಣಾ ಆಯೋಗಗಳು

೧೮೦೫ ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗಂಂಡ್ಲುಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೇ ?

ಅ) ಸರ್ಕಾರವು ೧೯೮೩ ರಿಂದ ಸಾರ್ವಜನಿಕರ ವಿಷಯಂಕ್ಕೆ ಸಂಬಂಧಿಸಿದಂತೆ ಎಷ್ಟು ವಿಚಾರಣಾ ಆಯೋಗಗಳನ್ನು ರಚಿಸಿದೆ,

ಆ) ಅವುಗಳಲ್ಲಿ ಎಷ್ಟು ವಿಚಾರಣಾ ಆಯೋಗಗಳು ತಮ್ಮ ವರದಿಯಂನ್ನು ಸಲ್ಲಿಸಿವೆ,

ಇ) ಸ್ವೀಕೃತ ವರದಿಗಳ ಮೇಲೆ ಸರ್ಕಾರವು ತೆಗೆದುಕೊಂಡ ಕ್ರಮಂವೇನು,

ಈ) ಉಳಿದ ಆಯೋಗಗಳು ತಮ್ಮ ವರದಿಗಳನ್ನು ಸಲ್ಲಿಸದೇ ಇರುವುದಕ್ಕೆ ಕಾರಣವೇನು ಮತ್ತು ಇದರ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮಂಬ್ಯೆ ಮಂತ್ರಿಗಳು).—

ಅ) ೨೬

ಆ) ೨೦ ಆಯೋಗಗಳು ತಮ್ಮ ವರದಿಯನ್ನು ಸಲ್ಲಿಸಿವೆ.

ಇ) ಅನುಬಂಧದಲ್ಲಿ ತೋರಿಸಿದಂತೆ.

ಈ) ಉಳಿದ ಆಯೋಗಗಳು ವಿಚಾರಣೆಯಿನ್ನು ಪೂರ್ಣಗೊಳಿಸಲು ತುರ್ತು ಕ್ರಮಂಗಳನ್ನು ತೆಗೆದುಕೊಳ್ಳುತ್ತಿವೆ.

ಅನುಬಂಧ

ವಿಚಾರಣಾ ಆಯೋಗಗಳಂ ಸಲ್ಲಿಸಿದ ವರದಿಗಳ ಮೇಲೆ ಸರ್ಕಾರವು ತೆಗೆದುಕೊಂಡ ಕ್ರಮಂ

೧. ರಂಗನಾಥಆಚಾರ್ ಅಗ್ನಿಹೋತ್ರಿ ಆಯೋಗ.—

(ದಿನಾಂಕ ೪-೯-೧೯೮೨ ರಂದು ಬೆಂಗಳೂರು ನಗರದ ವಿವೇಕ ನಗರದಲ್ಲಿ ಮತ್ತು ಮಂಡ್ಯ ತಾಲ್ಲೂಕಿನ ಮಳವಳ್ಳಿಯಲ್ಲಿ ದಿನಾಂಕ ೧೫-೮-೧೯೮೨ ರಂದು ನಡೆದ ಗೋಳಿಬಾರ್ ಬಗ್ಗೆ ವಿಚಾರಣೆ ಮಾಡಲು)

ಆಯೋಗವು ಗೋಳಿಬಾರ್ ಅವಶ್ಯವಾಗಿತ್ತು ಹಾಗೂ ಉಪಯೋಗಿಸಿದ ಬಲವು ನ್ಯಾಯ ಸಮ್ಮತವಾಗಿತ್ತು ಎಂದು ನಿರ್ಣಯಕ್ಕೆ ಬಂದಿದೆ. ಆದ್ದರಿಂದ ಮುಂದಿನ ಯಾವುದೇ ಕ್ರಮವು ಅವಶ್ಯ ವಿರುವುದಿಲ್ಲ

೨. ಮಹಮ್ಮದ್ ಆಸಿಫ್ ಆಯೋಗ.—

(ದಿನಾಂಕ ೨೫-೫-೧೯೮೨ ರಂದು ಶಿವಮೊಗ್ಗ ಜಿಲ್ಲೆಯ ನಾಗಸಮುದ್ರದಲ್ಲಿ ಮತ್ತು ದಿನಾಂಕ ೨೬-೯-೧೯೮೨ ರಂದು ಹಾಸನ ಜಿಲ್ಲೆಯ ದೊಡ್ಡಹಳ್ಳಿಯಲ್ಲಿ ನಡೆದ ಗೋಳಿಬಾರ್ ಬಗ್ಗೆ ವಿಚಾರಣೆ ಮಾಡಲು)

ಆಯೋಗವು ದೊಡ್ಡಹಳ್ಳಿಯಲ್ಲಿ ನಡೆದ ಗೋಳಿಬಾರ್‌ನ್ನು ಸಮರ್ಥಿಸಿದೆ ಮತ್ತು ಉಪಯೋಗಿಸಿದಂಥ ಬಲವು ಆ ಸಂದರ್ಭದಲ್ಲಿ ಕನಿಷ್ಠವಾಗಿತ್ತು ಎಂದು ತಿಳಿಸಿದೆ. ಆದುದರಿಂದ ಯಾವುದೇ ಕ್ರಮವು